**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**
**ಎಸ್.ಸಿ. ಸಂಃ 10006/2023**

ಪಿಡಬ್ಲೂ- 11

ಸಿಡಬ್ಲೂ- 14

| | | |
|---|---|---|
| ಸಾಕ್ಷಿ ಹೆಸರು | - | ದೇವರಾಯ |
| ತಂದೆ ಹೆಸರು | - | ಜಿ. ನಾರಾಯಣ |
| ವಯಸ್ಸು | - | 62 ವರ್ಷ |
| ಉದ್ಯೋಗ | - | ನಿವೃತ್ತ ಪಿ ಎಸ್ ಐ |
| ವಾಸಃ | - | ಶಿವಮೊಗ್ಗ |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 09-12-2025.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ದಿನಾಂಕಃ 01-07-2021 ರಿಂದ ದಿಃ21-01-2023 ರ ವರೆಗೆ ಸೊರಬ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ಮಾಡಿರುತ್ತೇನೆ.

ದಿನಾಂಕಃ 14-03-2022 ರಂದು ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ಮುಂದುವರೆದ ಹೇಳಿಕೆಯನ್ನು ಸ್ವೀಕರಿಸಿ ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಃ 31/2022 ಕಲಂ 504, 506, 323, 324 R/W 34 ಐ ಪಿ ಸಿ ಪ್ರಕರಣದಲ್ಲಿ ಹೆಚ್ಚುವರಿಯಾಗಿ

307 ಐಪಿ ಸಿ ಸೇರಿಸಿ ತನಿಖೆಯನ್ನು ಮಾಡಲು ಮಾನ್ಯ ನ್ಯಾಯಾಲಯಕ್ಕೆ ಅನುಮತಿ ನೀಡುವಂತೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ಚಾಸಾ1 ರವರು ನೀಡಿದ ಮುಂದುವರೆದ ಹೇಳಿಕೆ ದೂರನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಚಾಸಾ1 ರವರ ಮುಂದುವರೆದ ಹೇಳಿಕೆ ದೂರನ್ನು ನಿಪಿ –11 ಎಂದು, ನಿಪಿ 11 ರಲ್ಲಿ ಸಾಕ್ಷಿ ಬರೆದಿರುವ ಷರಾ ಮತ್ತು ಸಹಿಯನ್ನು ಒಟ್ಟಾಗಿ ನಿಪಿ –11(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯಕ್ಕೆ ನೀಡಿದ ಮನವಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ –12 ಎಂದು, ಸಾಕ್ಷಿಯ ಸಹಿಯನ್ನು ನಿಪಿ –12(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ1 ಮತ್ತು ಚಾಸಾ–2 ರವರು ಠಾಣೆಗೆ ಹಾಜರಾಗಿ ಘಟನೆ ನಡೆದ ಸಮಯದಲ್ಲಿ ತಾವು ಧರಿಸಿದ್ದ ರಕ್ತ ಕಲೆಯಾಗಿದ್ದ ಬಟ್ಟೆಗಳನ್ನು ನನ್ನ ಮುಂದೆ ಹಾಜರುಪಡಿಸಿದರು. ನಾನು ಪಂಚರಾದ ಚೇತನ್ ಕುಮಾರ್ ಮತ್ತು ದಯಾನಂದರವರಿಗೆ ನೋಟೀಸ್ ಅನ್ನು ಜಾರಿ ಮಾಡಿ ಸದರಿ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಳ್ಳುವಾಗ ಸಾಕ್ಷಿಯಾಗಿರಬೇಕೆಂದು ಕೋರಿಕೊಂಡಿರುತ್ತೇನೆ. ನಂತರ ಸದರಿ ಪಂಚರ ಸಮಕ್ಷಮ ಚಾಸಾ1 ರವರು ನೀಡಿದ ರಕ್ತ ಕಲೆಯಾಗಿದ್ದ ಬಟ್ಟೆಗಳಾದ 1) ರಕ್ತದ ಕಲೆಯಾಗಿದ್ದ ಬಿಳಿ ಬಣ್ಣದ ಟೋಪಿ, 2) ರಕ್ತ ಕಲೆಯಾಗಿದ್ದ ನೀಲಿ ಕಂದು ಬೂದು ಬಣ್ಣ ಮಿಶ್ರಿತ ತುಂಬು

ತೋಳಿನ ಅಂಗಿ , ಮತ್ತು ಚಾಸಾ2 ರವರು ನೀಡಿದ 1) ರಕ್ತದ ಕಲೆವುಳ್ಳ ಆಕಾಶ ನೀಲಿ ಬಣ್ಣದ ಅರ್ಧ ತೋಳಿನ ಅಂಗಿ ಯನ್ನು ಅಮಾನತ್ತುಪಡಿಸಿಕೊಂಡು, ಸದರಿ ಬಟ್ಟೆಗಳನು ಬಿಳಿ ಬಟ್ಟೆಯಲ್ಲಿ ಹಾಕಿ ಎಸ್ ಎಂಬ ಅಕ್ಷರದಿಂದ ಸೀಲ್ ಮಾಡಿ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತೇನೆ. ಈಗ ತೋರಿಸಿದ ನಿಪಿ -2 ನಾನು ಪಂಚರಿಗೆ ನೀಡಿದ ನೋಟೀಸ್ ಆಗಿರುತ್ತದೆ. ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ -2(ಡಿ) ಎಂದು ಗುರುತಿಸಲಾಯಿತು. ಅಮಾನತ್ತು ಪಂಚನಾಮೆಯನ್ನು ಮಧ್ಯಾಹ್ನ 2 ರಿಂದ 3 ಗಂಟೆವರೆಗೆ ಮಾಡಿರುತ್ತೇನೆ ಮತ್ತು ಆ ಸಮಯದಲ್ಲಿ ಫೋಟೋಗಳನ್ನು ತೆಗೆದಿರುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ -3 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು. ಫೋಟೋವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ -4 ಎಂದು ಗುರುತಿಸಲಾಗಿದೆ. ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಮಾಲುಪಟ್ಟಿ ಸಂಃ22/2022 ರಲ್ಲಿ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅಮಾನತ್ತುಪಡಿಸಿಕೊಂಡ ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ. ಅವುಗಳನ್ನು ಈಗ ನೋಡುತ್ತಿದ್ದು ಬಟ್ಟೆಗಳನ್ನು ಈಗಾಗಲೇ ಮು ಮಾ 1 ರಿಂದ ಮು ಮಾ -3 ಎಂದು ಗುರುತಿಸಲಾಗಿದೆ.

ದಿನಾಂಕಃ 06-03-2022 ರಂದು ಚಾಸಾ2 ರವರ ಗಾಯದ ಪ್ರಮಾಣಪತ್ರವನ್ನು ಸೊರಬ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ2 ರವರ ಗಾಯದ ಪ್ರಮಾಣಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ -13 ಎಂದು ಗುರುತಿಸಲಾಯಿತು. ಸಾಕ್ಷಿಯ ಸ್ವೀಕೃತ ಸಹಿಯನ್ನು ನಿಪಿ - 13(ಎ) ಎಂದು ಗುರುತಿಸಲಾಯಿತು. ದಿನಾಂಕಃ 05-06-2022 ರಂದು ಚಾಸಾ1 ರವರ ಗಾಯದ ಪ್ರಮಾಣಪತ್ರವನ್ನು ಸೊರಬ ಸರ್ಕಾರಿ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ1 ರವರ ಗಾಯದ ಪ್ರಮಾಣಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ -14 ಎಂದು ಗುರುತಿಸಲಾಯಿತು. ಸಾಕ್ಷಿಯ ಸ್ವೀಕೃತ ಸಹಿಯನ್ನು ನಿಪಿ - 14(ಎ) ಎಂದು ಗುರುತಿಸಲಾಯಿತು.

ದಿನಾಂಕಃ 05-07-2022 ರಂದು ಆರ್ ಎಫ್ ಎಸ್ ಎಲ್ ದಾವಣಗೆರೆಯಿಂದ ಎಫ್ ಎಸ್ ಎಲ್ ವರದಿ ಬಂದಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸ್ವೀಕೃತ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು.

ನಾನು ವೈಧ್ಯರ ಮುಂದೆ ಮು ಮಾ -4 ನ್ನು ಹಾಜರುಪಡಿಸಿ ಚಾಸಾ1 ಮತ್ತು ಚಾಸಾ2 ರವರಿಗೆ ಸದರಿ ಆಯುಧದಿಂದ ಹಲ್ಲೆ ಮಾಡಿದರೆ ಗಾಯದ ಪ್ರಮಾಣಪತ್ರಗಳಲ್ಲಿ ಹೇಳಿದ ರೀತಿಯ ಗಾಯಗಳು ಸಂಭವಿಸುತ್ತದೆಯೇ ಎಂದು ಅಭಿಪ್ರಾಯ ನೀಡಿ ಎಂದು ಕೋರಿಕೊಂಡಿರುತ್ತೇನೆ. ನಂತರ ದಿನಾಂಕಃ 13-08-2022 ರಂದು ಸೊರಬ ಸರ್ಕಾರಿ ಆಸ್ಪತ್ರೆಯ ವೈಧ್ಯರು ಮು ಮಾ -4 ರಿಂದ ಹಲ್ಲೆ ಮಾಡಿದರೆ ಗಾಯದ ಪ್ರಮಾಣಪತ್ರದಲ್ಲಿ ಹೇಳಿರುವ ಗಾಯಗಳು ಸಂಭವಿಸುವ ಸಾಧ್ಯತೆ ಇರುತ್ತದೆ ಎಂದು ಅಭಿಪ್ರಾಯವನ್ನು ನೀಡಿರುತ್ತಾರೆ. ಸದರಿ ಅಭಿಪ್ರಾಯ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ -15 ಎಂದು ಗುರುತಿಸಲಾಯಿತು. ಅಮಾನತ್ತು ಪಂಚನಾಮೆ ಮಾಡುವ ಸಮಯದಲ್ಲಿ ತೆಗೆದ ಫೋಟೋ ಬಗ್ಗೆ ನಾನು ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರ ಅಡಿಯಲ್ಲಿ ದೃಢೀಕರಣ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ದೃಢೀಕರಣ ಪತ್ರವನ್ನು ನಿಪಿ -16 ಎಂದು ಸಾಕ್ಷಿಯ ಸಹಿಯನ್ನು ನಿಪಿ - 16(ಎ) ಎಂದು ಗುರುತಿಸಲಾಯಿತು. ಸದರಿ ಫೋಟೋ ಇರುವ ಸಿ ಡಿ ಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ -17 ಎಂದು ಗುರುತಿಸಲಾಯಿತು. ಚಾಸಾ-2 ರವರ ಮನೆಯ ಕಂದಾಯ ರಶೀದಿಯನ್ನು ಗ್ರಾಮ ಪಂಚಾಯಿತಿ ಹಳೇಸೊರಬದಿಂದ ಸ್ವೀಕರಿಸಿರುತ್ತೇನೆ. ಸದರಿ ಕಂದಾಯ ರಶೀದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ -

18 ಎಂದು ಗುರುತಿಸಲಾಯಿತು. ಸಾಕ್ಷಿಯ ಸ್ವೀಕೃತ ಸಹಿಯನ್ನು ನಿಪಿ –18(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿತರ ವಿರುದ್ಧ ಆರೋಪ ಸಾಭೀತಾದ ಕಾರಣ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ವರದಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಈ ಎನ್ ವಕೀಲರಿಂದಃ</u>**

ಈ ಪ್ರಕರಣದ ಕಡತವನ್ನು ನಾನು ದಿನಾಂಕಃ 14–03–2022 ರಂದು ಬೆಳಿಗ್ಗೆ ಸ್ವೀಕರಿಸಿರುತ್ತೇನೆ ಎಂದರೆ ಸರಿ. ಅದಕ್ಕೂ ಮೊದಲು ಈ ಪ್ರಕರಣದ ತನಿಖೆಯನ್ನು ಚಾಸಾ13 – ಮಹೇಶರವರು ಮಾಡಿರುತ್ತಾರೆ. ಚಾಸಾ1 ರವರು ನನ್ನ ಮುಂದೆ ಯಾವುದೇ ಮುಂದುವರೆದ ಹೇಳಿಕೆ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ1 ಮತ್ತು ಚಾಸಾ2 ರವರು ಮು ಮಾ –1 ರಿಂದ 3 ನ್ನು ನನ್ನ ಮುಂದೆ ಹಾಜರುಪಡಿಸಿರುವುದಿಲ್ಲ, ನಾನು ಅವುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ, ತನಿಖೆಗೆ ಅನುಕೂಲವಾಗಲಿ ಎಂದು ನಿಪಿ –4 ಫೋಟೋವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ತನಿಖಾ ಕಾಲದಲ್ಲಿ ದಾಖಲೆಗಳಿಗೆ ರುಜು ಹಾಕುವಾಗ ದಿನಾಂಕವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಕೆಲವು ದಾಖಲೆಗಳಿಗೆ ದಿನಾಂಕ ನಮೂದು ಮಾಡಿರುತ್ತೇನೆ, ಕೆಲವು ದಾಖಲೆಗಳಿಗೆ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ನಿಪಿ – 13

ಮತ್ತು ನಿಪಿ –14 ಗಾಯದ ಪ್ರಮಾಣ ಪತ್ರದಲ್ಲಿ ಸಹಿ ಹಾಕುವಾಗ ನಾನು ದಿನಾಂಕ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ನಿಪಿ –15 ವರದಿಯನ್ನು ಯಾವ ದಿನಾಂಕದಂದು ಪಡೆದುಕೊಂಡಿರುತ್ತೇನೆ ಎಂದು ರುಜು ಹಾಕಿರುವುದಿಲ್ಲ ಎಂದರೆ ಸರಿ. ವೈಧ್ಯರು ನನ್ನ ಕೋರಿಕೆಯ ಮೇರೆಗೆ ನಿ ಪಿ –15 ರಂತೆ ವರದಿ ನೀಡಿರುತ್ತಾರೆ, ಅದರಲ್ಲಿ ದಿನಾಂಕ ತಿದ್ದುಪಡಿ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ –15 ರ ವರದಿಯನ್ನು ಈ ಕೇಸಿನ ಸಲುವಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ನನ್ನ ತನಿಖೆಯ ಸಂದರ್ಭದಲ್ಲಿ ಮು ಮಾ 1 ರಿಂದ 3 ನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಮತ್ತು ನಿಪಿ 13 ರಿಂದ 15 ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ, ಅದು ನನ್ನ ತನಿಖೆಯ ಪೂರ್ವದಲ್ಲೇ ಕಡತದಲ್ಲಿದ್ದವು ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಸರಿಯಾಗಿ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರ್ ಎಫ್ ಎಸ್ ಎಲ್ ಗೆ ಸರಿಯಾದ ದಾಖಲಾತಿಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಮೇಲ್ನೋಟಕ್ಕೆ ಮುಂದುವರೆದ ತನಿಖೆಯ ಅವಶ್ಯಕತೆ ಇಲ್ಲದಿದ್ದರೂ ಸಹ ನಾನು ತನಿಖೆಯನ್ನು ಮುಂದುವರೆಸಿ ಆರೋಪಿತರ ವಿರುದ್ಧ ಸುಳ್ಳು

ದೋಷಾರೋಪಣಾ ವರದಿಯನ್ನು ನ್ಯಾಯಾಲಯದ ಮುಂದೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).